**ದಿಃ 21-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎಸ್ ಜಿ ಎನ್ ವಕೀಲರಿಂದಃ**

ನಮ್ಮ ಮನೆತನದ ಮೂಲ ಪುರುಷ ವೀರಭದ್ರಪ್ಪ. ಸದರಿಯವರು ನನ್ನ ತಂದೆ. ನಮ್ಮ ತಾಯಿಯ ಹೆಸರು ಸಂಗವ್ವ. ನಮ್ಮ ತಂದೆ ತಾಯಿಗೆ ಒಟ್ಟು 7 ಜನ ಮಕ್ಕಳು. ಅವರು ವಾದಿಯರು ಮತ್ತು ಪ್ರತಿವಾದಿ ನಂ 1. ನಮ್ಮ ಸಹೋದರ ಚನ್ನಪ್ಪ ಹಾಗೂ ಸಹೋದರಿ ಮಹಾದೇವಿ ಮೃತಪಟ್ಟಿದ್ದಾರೆ. ಮಹಾದೇವಿಯ ಗಂಡನ ಹೆಸರು ಚನ್ನಪ್ಪ ಹೆಂಡಿ. ಮಹಾದೇವಿಗೆ ಸವಿತಾ ಹಾಗೂ ಗೀತಾ ಎಂಬ ಎರಡು ಜನ ಮಕ್ಕಳು ಇರುತ್ತಾರೆ ಎಂದರೆ ನಿಜ. ಗೀತಾಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ನಮ್ಮ ಸಹೋದರಿ ಮಾಹದೇವಿಗೂ ಕೂಡಾ ನಮ್ಮ ಹಾಗೆ ಆಸ್ತಿಗಳಲ್ಲಿ ಹಕ್ಕು ಇದೆ ಎಂದರೆ ನಿಜ. ಮಹಾದೇವಿಯ ವಾರಸುದಾರರಿಗೆ

ಪಾಲು ಹೋಗುತ್ತದೆ ಎಂದರೆ ಸಾಕ್ಷಿ ಹೋಗುತ್ತದೆಯೇ ಎಂದು ಕೇಳುತ್ತಾರೆ. ಮಹಾದೇವಿಯ ಗಂಡ ಚನ್ನಪ್ಪ ಹಾಗೂ ಮಗಳು ಗೀತಾ ಜೀವಂತ ಇದ್ದಾರೆ. ದಾವೆಯಲ್ಲಿ ಅವರನ್ನು ಸೇರಿಸಲೂ ಯಾವುದೆ ತೊಂದರೆ ಇಲ್ಲ. ಸದರಿಯವರು ಜೀವಂತ ಇರುವ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ.

ದಾವಾ ಆಸ್ತಿಗಳನ್ನು ನಮ್ಮ ತಂದೆ ಖರೀದಿಸಿರುತ್ತಾರೆ. ಚನ್ನಪ್ಪ ಮತ್ತು ಶೇಖಪ್ಪ ಹಣ ಕೊಟ್ಟು ದಾವಾ ಆಸ್ತಿಗಳನ್ನು ನಮ್ಮ ತಂದೆಯ ಹೆಸರಿನಲ್ಲಿ ಖರೀದಿಸಿದ್ದಾರೆ ಎನ್ನುವ ಬಗ್ಗೆ ದಾಖಲೆ ನೋಡಿದ್ದೇನೆ. ಸದರಿ ದಾಖಲೆಯನ್ನು ಹಾಜರ ಪಡಿಸಿದ್ದೇನೆ. ನಮ್ಮ ತಂದೆ ಸಹೋದರ ಬಸಪ್ಪ ಮನಗುಂಡಿ ಅಂದರೆ ನಿಜ. ಬಸಪ್ಪ ಮನಗುಂಡಿ, ಅಂಗಡಿ ಮತ್ತು ಶಾನಭೋಗ ಇವರ ಆಸ್ತಿಗಳನ್ನು ಪ್ರತಿವಾದಿ ನಂ 1 ಹಾಗೂ ಇನ್ನೊಬ್ಬ ಸಹೋದರ ಚನ್ನಪ್ಪ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ನಿಜ. ಜಮೀನು ಸಾಗುವಳಿ ಮಾಡುವುದರಿಂದ ಸಾಕಷ್ಟು ಉತ್ಪನ್ನ ಬರುತ್ತಿತ್ತು ಎಂದರೆ ನಿಜ. ಸದರಿ ಉತ್ಪನ್ನಗಳಿಂದ ಸರ್ವೆ ನಂ 97/1 ಎ ಮತ್ತು 97/1 ಬಿ ಖರೀದಿ ಮಾಡಿದ್ದಾರೆ ಎಂದರೆ ನಿಜ. ದಾವಾ ಜಮೀನುಗಳ ಸರ್ವೆ ನಂಬರ ಹಾಗೂ ಕ್ಷೇತ್ರ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ನಮ್ಮ ತಂದೆ ಹಿಡಿದಿದ್ದರಿಂದ ನಮ್ಮ ಕುಟುಂಬಕ್ಕೆ ಬಂದಿರುತ್ತವೆ. ನಮ್ಮ ತಂದೆ ದುಡಿದು ದಾವಾ ಆಸ್ತಿಗಳನ್ನು ಖರೀದಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರ ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ನಾನು ಅನಕ್ಷರಸ್ಥಳಾಗಿದ್ದು ಅವುಗಳ ಬಗ್ಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ಹೇಳಿದ ಹಾಗೆ ಬರೆದಿದ್ದಾರೆ. ನಾನು ದಾಖಲೆಗೆ ಸಹಿ ಮಾಡುವಾಗ ನೋಡಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ನಿಜ. ನನ್ನ ಅಡ್ಡ ಹೆಸರು ನರಗುಂದ ಹಾಗೂ ಅರಳಿಕಟ್ಟಿ ಎಂದು ಕರೆಯುತ್ತಾರೆ. ನಾನು ಸಹಿ ಮಾಡುವಾಗ ಮಂಜು ಡಿ. ಬ ಅರಳಿಕಟ್ಟಿ ಹಾಗೂ ಮಂಜುಳಾ ಬ. ನರಗುಂದ ಅಂತಲೂ ಸಹಿ ಮಾಡುತ್ತೇನೆ ಎಂದರೆ ನಿಜ. ಸಾಕ್ಷಿಗೆ ಎರಡು ಸ್ಟ್ಯಾಂಪ ಪೇಪರ ಮೇಲೆ ಬರೆದ ದಾಖಲೆಗಳಲ್ಲಿ ಇರುವ ಸಹಿಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ಒಪ್ಪಿಕೊಂಡಿರುತ್ತಾರೆ. ಹಕ್ಕುಬಿಟ್ಟ ಪತ್ರವನ್ನು ನಿಡಿ-1 ಹಾಗೂ ಅಪಸಾತ್ ವಾಟ್ನಿ ಪತ್ರ ಎಂಬ ಬಾಂಡ ಮೇಲೆ ಬರೆದ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಡಿ-1(ಎ) ಮತ್ತು ನಿಡಿ-2(ಎ) ಎಂದು ಗುರುತಿಸಲಾಯಿತು.

1 ನೇ ಪ್ರತಿವಾದಿ ಹಾಗೂ ಇನ್ನೊಬ್ಬ ಸಹೋದರ ಚನ್ನಪ್ಪನನ್ನು ದಾವಾ ಆಸ್ತಿಗಳಲ್ಲಿಯ ಕಬ್ಜಾ ಬಿಟ್ಟುಕೊಡುವಂತೆ ಕೇಳಿಲ್ಲ ಇತ್ತಿಚಿಗೆ ಕೇಳಿದ್ದೇವೆ. ಸುಮಾರು 10 ವರ್ಷಗಳ ಹಿಂದೆ ಕೇಳಿದ್ದೇವೆ. ನಾವು ಕೇಳಿದಾಗ ಶೇಖಪ್ಪ ಮತ್ತು ಚನ್ನಪ್ಪ ಪಾಲು ಬಿಟ್ಟುಕೊಟ್ಟಿಲ್ಲ. ಆ ಸಮಯದಲ್ಲಿ ದಾವೆ ಸಲ್ಲಿಸಲು ತೊಂದರೆ ಇದ್ದುದರಿಂದ ದಾವೆ ಸಲ್ಲಿಸಿರಲಿಲ್ಲ. ನನಗೆ ಹುಷಾರ ಇಲ್ಲದ ಕಾರಣ ದಾವೆ ಸಲ್ಲಿಸಿರಲಿಲ್ಲ. ನಾನು ಸಾಕ್ಷಿಯನ್ನು ನನ್ನ ಪರವಾಗಿ ಮಾತ್ರ ಹೇಳುತ್ತಿದ್ದೇನೆ. ಉಳಿದ ವಾದಿಯರಿಗೆ ಅವರ ಕುಟುಂಬದಲ್ಲಿ ಸಮಸ್ಯೆ ಇತ್ತು. 2 ನೇ ವಾದಿ ದುಡಿದು ತಿನ್ನುತ್ತಿದ್ದು ಅವಳ ಗಂಡ ಹಾಗೂ ಮಾವ ತೀರಿಕೊಂಡಿದ್ದರಿಂದ

ದಾವೆ ಸಲ್ಲಿಸಿರಲಿಲ್ಲ. 3 ನೇ ವಾದಿಯ ಗಂಡ ಬಿಟ್ಟಿದ್ದರಿಂದ ಅವಳನ್ನು 2 ನೇ ಮದುವೆ ಮಾಡಿ ಕೊಡಲಾಗಿತ್ತು. 2 ನೇ ಗಂಡ ಕೂಡಾ ತೊಂದರೆ ಕೊಟ್ಟಿದ್ದರಿಂದ ಈಗ ದಾವೆ ಸಲ್ಲಿಸಿದ್ದೇವೆ. 4 ನೇ ವಾದಿಗೆ ಆರೋಗ್ಯ ತೊಂದರೆ ಇತ್ತು. ನಮ್ಮ ತೊಂದರೆ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ದಾಖಲೆಗಳನ್ನು ಹಾಜರ ಪಡಿಸಲು ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ ತೊಂದರೆ ಇದ್ದುದರಿಂದ ದಾವೆ ಹಾಕಿಲ್ಲ ಎನ್ನುತ್ತಾರೆ.

2016 ರಲ್ಲಿ ನಾವು ವಾಟ್ನಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ ವಾಟ್ನಿ ಆಗಿರುವುದಿಲ್ಲ. ವಾಟ್ನಿ ಪ್ರಕಾರ ಪ್ರತಿವಾದಿ ನಂ 1, 3 ಮತ್ತು 4 ರವರ ಹೆಸರಿನಲ್ಲಿ ಉತಾರ ಆದ ಬಗ್ಗೆ ನಾವು ದೂರು ಸಲ್ಲಿಸಿದ್ದೇವೆ. ವಾಟ್ನಿ ಮಾಡಿಕೊಂಡಿರುವುದು ಯಾವಾಗ ಗೊತ್ತಾಗಿದೆ ಎಂದರೆ ಸಾಕ್ಷಿ ವಾಟ್ನಿ ಮಾಡಿಕೊಂಡಿಲ್ಲ ಇಲ್ಲಿಯವರೆಗೆ ವಾಟ್ನಿ ಆಗಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ಸಲ್ಲಿಸಿದ ತಕರಾರಿನ ಬಗ್ಗೆ ತಿಳಿದುಕೊಂಡಿದ್ದೇನೆ. ತಕರಾರಿನಲ್ಲಿ ಬರೆದ ವಿಷಯ ನನಗೆ ಹೇಳಲು ಬರುವುದಿಲ್ಲ. 2016 ರಲ್ಲಿ ವಾಟ್ನಿ ಮಾಡಿಕೊಂಡು ಉತಾರನಲ್ಲಿ ಹೆಸರು ದಾಖಲಿಸಿಕೊಂಡಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ನಾವು ಹಿರಿಯರನ್ನು ಕೂಡಿಸಿ ವಾಟ್ನಿ ಮಾಡಿಕೊಡುವ ಬಗ್ಗೆ 2016 ರಲ್ಲಿ ಯಾವುದೆ ಪ್ರಯತ್ನ ಮಾಡಿಲ್ಲ. 2016 ರಲ್ಲಿ ಆದ ವಾಟ್ನಿ ಪತ್ರಕ್ಕೆ ನಿಡಿ-1 ಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ-3 ರಲ್ಲಿ ಬಹಳಷ್ಟು ಜನರ ಹೆಸರುಗಳು ಜಂಟಿಯಾಗಿ ಇರುತ್ತವೆ ಎಂದರೆ ಸಾಕ್ಷಿ ನಮ್ಮ ತಂದೆ ಜೊತೆಗೆ ಇರುತ್ತವೆ ಎನ್ನುತ್ತಾರೆ. ಬಸಪ್ಪ ದಳವಾಯಿ ಇವರ ಹೆಸರು ಉತಾರದಲ್ಲಿ ಇರುತ್ತದೆ ಎಂದರೆ ನಿಜ. 5 ಎಕರೆ 11 ಗುಂಟೆ ಜಮೀನು ಬಸಪ್ಪ ದಳವಾಯಿ ಇವರ ಹಿಸ್ಸೆ ಒಡೆದು ಹೋಗಿರುತ್ತದೆ. ಸದರಿ ಜಮೀನಿನಲ್ಲಿ ನಮಗೆ ಅರ್ಧ ಭಾಗ ಇರುತ್ತದೆ. ಉತಾರದಲ್ಲಿ ಒಡೆದಿರುವ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇನೆ. ನಮ್ಮ ಪಾಲಿನ ಜಮೀನಿನ ಚಕ್ಕಬಂದಿ ಹೇಳಲು ಬರುವುದಿಲ್ಲ. ಉತಾರದಲ್ಲಿ ಇಂದಿಗೂ ಕೂಡಾ ಜಂಟಿಯಾಗಿ ಎಲ್ಲರ ಹೆಸರುಗಳು ಇರುತ್ತವೆ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.

**ಒ ಎಸ್ ನಂ. 69/2022**
**ಪಿ ಡಬ್ಲ್ಯೂ: 01**